**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

ಓಎಸ್.294–12

ಪಿ.ಡಬ್ಲ್ಯೂ.1

ಹೆಸರು ಃ ಮುನಿರತ್ನಮ್ಮ

ಪ್ರಮಾಣೀಕೃತ ದಿನಾಂಕಃ– 04.12.2018

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ–**

ನಿಪಿ.14 ರಿಂದ 16 ಅನ್ನು ಯಾವ ಉದ್ದೇಶಕ್ಕೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಜಮೀನಿನಲ್ಲಿ ಭಾಗ ಪಡೆಯಲು ಸಲ್ಲಿಸಿದ್ದೇನೆ ಎಂದು ಹೇಳಿರುತ್ತಾರೆ. ನಿಪಿ.14 ರಿಂದ 16ರಲ್ಲಿ ನನ್ನ ಹೆಸರು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಿಪಿ.14ರಲ್ಲಿ ಸಿರಿಯಲ್.ನಂ.37ರಲ್ಲಿ ನನ್ನ ಹೆಸರು ಇದೆ ಎಂದು ಹೇಳಿರುತ್ತಾರೆ. ನಿಪಿ.14 ರಿಂದ 16ರಲ್ಲಿ ಮನೆ ನಂ.56ರಲ್ಲಿ ನಮ್ಮ ತಂದೆ ಹೆಸರು ಮತ್ತು ಮನೆ ನಂ.55ರಲ್ಲಿ ನಮ್ಮ ದೊಡ್ಡಪ್ಪನ ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿ ಹೆಸರು ಚೆನ್ನಮ್ಮ. ನಿಪಿ.14 ರಿಂದ 16ರಲ್ಲಿ ನನ್ನ ಹೆಸರು ಇಲ್ಲದಿದ್ದರು ಈ ದಾವೆಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿವಾಹವಾದ ಅಂದಿನಿಂದ ಅಂದರೆ 1998ರಿಂದ ನಮ್ಮ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ.

ಕ್ರಯ ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ನಾನು ಹಾಜರು ಇರಲಿಲ್ಲ ಎಂದರೆ ಸರಿ. ಆಗ ನಾನು ನನ್ನ ಗಂಡನ ಮನೆಯಲ್ಲಿದೇ ಎಂದರೆ ಸರಿ. 10ನೇ ಪ್ರತಿವಾದಿ ಅವತ್ತಿನ ಮಾರುಕಟ್ಟೇ ಮೌಲ್ಯಕ್ಕೆ ದಾವಾ ಆಸ್ತಿಯನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಹೊಸಕೋಟೆ.**